ಇರುವುದರಿಂದ ಬಹಳ ದುರವಸ್ಥೆಯಾಗಿದೆ. ನಮಗೆ ಹೇಳಿಕೊಳ್ಳುವುದಕ್ಕೆ ಬಹಳ ನೋವಾಗುತ್ತದೆ.

ಶ್ರೀ ಅನಂತನಾಗ್:- ಮಾನ್ಯ ಅಧ್ಯಕ್ಷರೇ ಇದಕ್ಕೆ ಒಂದೇ ಒಂದು ಉತ್ತರವಿದೆ. ಎಲ್ಲೆಲ್ಲಿ ಪೈಪುಗಳು ಹಳೆಯದಾಗಿವೆ ಅಲ್ಲಿ ಅಗಲವಾದ ಪೈಪುಗಳನ್ನು ಹಾಕಬೇಕು. ಇದಕ್ಕೆ 370 ಲಕ್ಷ ಹಣವನ್ನು ಮೀಸಲಾಗಿಟ್ಟಿದ್ದೇವೆ. ತಕ್ಷಣ ಪರಿಶೀಲನೆ ಮಾಡಿ ಎಲ್ಲೆಲ್ಲಿ ಬದಲಾಯಿಸುವುದಕ್ಕೆ ಸಾಧ್ಯ ಅದನ್ನು ಮಾಡುತ್ತೇನೆನ್ನುವ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಕೊಡುತ್ತೇನೆ.

ಶ್ರೀ ಪಿ.ಎಸ್.ಪ್ರಕಾಶ್:- ಸಂಗಂ ಥಿಯೇಟರ್ ರೋಡ್‌ಗೆ 1994ರಲ್ಲಿ 8 ಲಕ್ಷ ರೂಪಾಯಿಯ ಪೈಪ್ಸ್‌ಗಳನ್ನು ಮಂಜೂರು ಮಾಡಿದ್ದರು. ಅದನ್ನು ಇವತ್ತಿನವರೆಗೂ ಹಾಕಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಿ ಕೇಳಿದಾಗ ಪೋಲೀಸ್ ಟ್ರಾಫಿಕ್‌ನವರು ನಮಗೆ ಅನುಮತಿ ಕೊಟ್ಟಿಲ್ಲ ಅವರು ಅನುಮತಿ ಕೊಡುವವರೆಗೂ ನಾವು ಈ ಪೈಪ್ಸ್‌ಗಳನ್ನು ಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಬಿ.ಡಬ್ಲ್ಯು.ಎಸ್.ಎಸ್.ಬಿ.ಯವರಿಗೂ ಪೋಲೀಸ್ ಟ್ರಾಫಿಕ್‌ನವರಿಗೂ ಸರಿಯಾದ ಹೊಂದಾಣಿಕೆ ಇಲ್ಲ. ಇವರು ಆರ್ಡರ್ ಮಾಡಿದರೂ ಎರಡು ವರ್ಷವಾದರೂ ಕೆಲಸಗಳು ಆಗುತ್ತಿಲ್ಲ ಅದರ ಬಗ್ಗೆ ಮಾನ್ಯ ಸಚಿವರ ಉತ್ತರ ಕೊಡಬೇಕು.

ಶ್ರೀ ಅನಂತನಾಗ್:- ಪ್ರಾಪರ್ ಕೋ ಆರ್ಡಿನೇಷನ್‌ಗೆ we will ensure, Sir.

ಅಧ್ಯಕ್ಷರು:- ಮಾನ್ಯ ಪ್ರಕಾಶ್ ಹುಕ್ಕೇರಿಯವರ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ. ಅವರು ಬೆಳಗಾಂನಲ್ಲಿದ್ದಾರೆ ಅಲ್ಲಿಂದ ಬರುವುದಕ್ಕಾಗಿಲ್ಲ ಅವರು ಅನುಮತಿ ಕೇಳಿದ್ದಾರೆ. ಮುಂದೆ ನಿಮ್ಮ ಪ್ರಶ್ನೆ ಇದ್ದ ದಿವಸ ತೆಗೆದುಕೊಳ್ಳೋಣ.

ವಿಷಯ:- ಪೋಲೀಸ್ ಸಿಬ್ಬಂದಿಗಾಗಿ ವಸತಿಗೃಹ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: (1392)

ಶ್ರೀ ಜಗದೀಶ್ (ಹುಬ್ಬಳ್ಳಿ-ಗ್ರಾಮೀಣ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾ ನಗರದಲ್ಲಿ ಪೋಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಲಾದ ವಸತಿಗಳೆಷ್ಟು ಹಾಗೂ ವಸತಿ ಬಡಾವಣೆಗಳೆಷ್ಟು?

ಆ) ಈಗಿರುವ ವಸತಿ ಗೃಹಗಳು ಹಾಗೂ ವಸತಿ ಬಡಾವಣೆಗಳು ಪೊಲೀಸ್ ಸಿಬ್ಬಂದಿಗೆ ಸಾಕಾಗುವುದೇ?

ಶ್ರೀ ಆರ್ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) ಹುಬ್ಬಳ್ಳಿ - ಧಾರವಾಡ ಮಹಾ ನಗರದಲ್ಲಿ ಪೋಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಲಾದ ವಸತಿ ಗೃಹಗಳು 970, ಹಾಗೂ 5 ಬಡಾವಣೆಗಳು.

ಆ) ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈಗಿರುವ ವಸತಿ ಗೃಹಗಳು ಹಾಗೂ ವಸತಿ ಬಡಾವಣೆಗಳು ಪೋಲೀಸ್ ಸಿಬ್ಬಂದಿಗೆ ಸಾಕಾಗುವುದೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಹಾಗಾದರೆ ಇನ್ನು ಹೆಚ್ಚಿನ ವಸತಿ ಗೃಹಗಳನ್ನು ಮಾಡಲಿಕ್ಕೆ ಸರಕಾರದವರು ಏನು ಕ್ರಮವನ್ನು ಕೈಗೊಂಡಿದ್ದಾರೆ. ಹಾಗೂ ಈ ಒಂದು ವಸತಿ ಗೃಹಗಳು ಬಡಾವಣೆಗಳು ಯಾವುದೇ ಒಂದು ನಿರ್ವಹಣೆ ಇಲ್ಲದೆ ಅಲ್ಲಿಯ ಶೌಚಾಲಯಗಳು ಕೆಟ್ಟು ಹೋಗಿ ತುಂಬಿ ಹೋಗಿ ಪೋಲೀಸ್ ಸಿಬ್ಬಂದಿಗೆ ಇದರಿಂದ ಬಹಳಷ್ಟು ತೊಂದರೆಯಾಗಿದೆ. ಮತ್ತು ಮನೆಗಳಾಗಲೀ, ಅದರ ಗೋಡೆಗಳಿಗಾಗಲೀ ಯಾವುದೇ ರಿಪೇರಿ ಇಲ್ಲದೆ ನಿರ್ವಹಣೆ ಇಲ್ಲದೆ ಬಹಳ ದುರಂತಮಯ ಪರಿಸ್ಥಿತಿಯಲ್ಲಿ ಇವೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು.

ಶ್ರೀ ಆರ್.ರೋಶನ್ ಬೇಗ್:- ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಪೋಲೀಸ್ ಸಿಬ್ಬಂದಿಯ ವಸತಿ ಗೃಹಗಳ ಕಟ್ಟಡಗಳು ಸರಿ ಇಲ್ಲ ರಿಪೇರಿ ಮಾಡಬೇಕು ಎಂದು ಹೇಳಿದ್ದಾರೆ. ನಾನು ಅಲ್ಲಿ ಪ್ರವಾಸ ಮಾಡುವುದಕ್ಕೆ ಹೋದಾಗ ಖುದ್ದಾಗಿ ಇನ್ಸ್‌ಪೆಕ್ಷನ್ ಮಾಡಿದ್ದೇನೆ. ಕೆಲವು ಮನೆಗಳಿಗೆ ಅಲ್ಲಿ ರಿಪೇರಿ ಮಾಡಿಸಬೇಕು. ಅದು ನಿಜ, ಸರಕಾರದಿಂದ ಆದಷ್ಟು ಬೇಗನೆ ಅದನ್ನು ರಿಪೇರಿ ಮಾಡಿಸಿಕೊಡುತ್ತೇನೆ. ಅದರ ಜೊತೆಗೆ ಪೋಲೀಸ್ ಕ್ವಾರ್ಟರ್ಸ್ ಬಗ್ಗೆ ತಾವು ಏನು ಹೇಳಿದಿರಿ ಇದನ್ನು ನಾನು ಒಪ್ಪುತ್ತೇನೆ. ನಮ್ಮ ರಾಜ್ಯದಲ್ಲಿ ಪೋಲೀಸ್ ಕ್ವಾರ್ಟರ್ಸ್‌ಗೆ ಸರಿಯಾಗಿ ಅಕಾಮಡೇಷನ್ ಕೊಡುವುದಕ್ಕಾಗುತ್ತಿಲ್ಲ. ಸುಮಾರು 2-3 ವರ್ಷಗಳಿಂದ 10 ಸಾವಿರ ಜನ ಪೋಲೀಸ್ ಕಾನ್‌ಸ್ಟೇಬಲ್ಸ್ ಅನ್ನು ಸರ್ವೀಸ್‌ನಲ್ಲಿ ಸೇರಿಸಿದ್ದೇವೆ. ನ್ಯಾಷನಲ್ ಪೋಲೀಸ್ ಕಮಿಷನ್ ರೆಕಮಂಡೇಷನ್ ಪ್ರಕಾರ ನಾವು ಶೇಕಡ 60 ಪರ್ಸೆಂಟ್ ಹೌಸಿಂಗ್ ಕೊಡಬೇಕಾಗಿದೆ. ನಾವು ಕರ್ನಾಟಕದಲ್ಲಿ 38 ಪರ್ಸೆಂಟಿಗೆ ಕೊಟ್ಟಿದ್ದೇವೆ. ಅದಕ್ಕೆ ಕಾರಣವೇನೆಂದರೆ ಕಳೆದ 3 ವರ್ಷಗಳಲ್ಲಿ 10 ಸಾವಿರ ಜನರಿಗೆ ನಾವು ಕೆಲಸಕೊಟ್ಟಿದ್ದೇವೆ. ಕರ್ನಾಟಕ ಸ್ಟೇಟ್ ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ ಎಂದು ಮಾಡಿ ಧಾರವಾಡದಲ್ಲಿ 60 ಸಾವಿರ ಪೋಲೀಸ್ ಕ್ವಾರ್ಟರ್ಸ್‌ಗೆ ಟೆಂಡರ್ ಫೈನಲೈಸ್ ಆಗಿದೆ. ಈ ಮನೆಗಳನ್ನು ಕಟ್ಟಲಿಕ್ಕೆ 1.38 ಕೋಟಿ ಮಂಜೂರಾಗಿದೆ. There is another proposal for construction of 140 quarters for 3.5 crores for Hubli - Dharwar. ಪ್ರಯಾರಿಟಿ ಲಿಸ್ಟ್‌ನಲ್ಲಿ 1997-98ರ ಸಾಲಿನಲ್ಲಿ ಇನ್‌ಕ್ಲೂಡ್ ಆಗಿದೆ. ಆದಷ್ಟು ಬೇಗನೆ ಟೆಂಡರ್ ಅನ್ನು ಫೈನಲೈಸ್ ಮಾಡುತ್ತೇನೆ. ಅದರ ಜೊತೆಗೆ ನಮಗೆ ಹುಡ್ಕೋದಿಂದ ಸುಮಾರು 20 ಕೋಟಿ ಬರಬೇಕಾಗಿದೆ. ಅದು ಬಂದ ಕೂಡಲೇ ಇನ್ನು

12 ಪೋಲೀಸ್ ಕಾನ್‌ಸ್ಟೇಬಲ್ಸ್ 4 ಪಿಎಸ್‌ಐ ಕ್ವಾರ್ಟರ್ಸ್ ಧಾರವಾಡದಲ್ಲಿ ಕೆಲಸ ಶುರು ಮಾಡುತ್ತೇವೆ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಕೆರೆಗಳಲ್ಲಿನ ಹೂಳನ್ನು ಎತ್ತುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 186 (1021)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳೆಷ್ಟು? ಅವುಗಳಲ್ಲಿ ನೀರಾವರಿ ಕೃಷಿಗಾಗಿ ಬಳಸುವ ಕೆರೆಗಳ ತಾಲ್ಲೂಕುವಾರು ವಿವರ ನೀಡುವುದು?

ಆ) ಹಾಗಿದ್ದಲ್ಲಿ ಈ ಮೇಲಿನ ಕೆರೆಗಳಲ್ಲಿ ಹೂಳು ತೆಗೆಯಲಾಗಿದೆಯೇ (ಕಳೆದ ಮೂರು ವರ್ಷಗಳಲ್ಲಿ ಹೂಳು ತೆಗೆಸಿರುವ ವಿವರ ನೀಡುವುದು)?

ಇ) ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ದುರಸ್ತಿ ಕೆಲಸಕ್ಕಾಗಿ ಕೈಗೊಂಡ ಬಗ್ಗೆ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿ ಒಟ್ಟು 1965 ಕೆರೆಗಳು ಇರುತ್ತವೆ. ಈ ಎಲ್ಲಾ ಕೆರೆಗಳನ್ನು ನೀರಾವರಿ ಕೃಷಿಗಾಗಿ ಬಳಸಲಾಗುತ್ತಿವೆ, 40 ಹೆಕ್ಟೇರ್‌ಗಿಂತ ಕಡಿಮೆ ನೀರಾವರಿ ಕ್ಷೇತ್ರವಿರುವ ಕೆರೆಗಳು ಜಿಲ್ಲಾ ಪಂಚಾಯತ್ತಿನ ನಿಯಂತ್ರಣದಲ್ಲಿದ್ದು, 40 ಹೆಕ್ಟೇರ್‌ಗಿಂತ ಮೇಲ್ಪಟ್ಟು ನೀರಾವರಿ ಕ್ಷೇತ್ರವಿರುವ ಕೆರೆಗಳ ಸಣ್ಣ ನೀರಾವರಿ ಉತ್ತರ ವಲಯದ ನಿಯಂತ್ರಣದಲ್ಲಿರುತ್ತದೆ.

ತಾಲ್ಲೂಕುವಾರು ವಿವರ ಹಾಗೂ ನೀರಾವರಿ ಕ್ಷೇತ್ರವನ್ನು ಕೆಳಗಡೆ ಕೊಡಲಾಗಿದೆ: